**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ವೈ.ಎ ನಾರಾಯಣ ಸ್ವಾಮಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಸರ್ಕಾರದ ಉತ್ತರ.**

**ವಿಕಲಚೇತನ ಅಧಿಕಾರಿ/ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಬಗ್ಗೆ ಘನ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲಿನ 2017ರಲ್ಲಿ ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ವಿಕಲಚೇತನ ಅಧಿಕಾರಿ/ನೌಕರರಿಗಾಗಿ ಗುರುತಿಸಲ್ಪಟ್ಟ ಹುದ್ದೆಗಳನ್ನು ಭರ್ತಿ ಮಾಡುವ ವಿಧಾನ ಹಾಗೂ ಮುಂಬಡ್ತಿಯಲ್ಲಿ ಶೇ.3ರಷ್ಟು ಅನುಪಾತವನ್ನು ಅನುಸರಿಸುವ ನಿಟ್ಟಿನಲ್ಲಿ ಮೀಸಲಾತಿಯನ್ನು ಕಾಯ್ದುಕೊಳ್ಳಲು ತೀರ್ಪು ನೀಡಲಾಗಿರುತ್ತದೆ. ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ತನ್ನ ಅಭಿಪ್ರಾಯವನ್ನು ಸಹ ನೀಡಿರುತ್ತದೆ.**

**ಈ ಬಗ್ಗೆ ಆಂಧ್ರಪ್ರದೇಶ, ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಲ್ಲಿ ವಿಕಲಚೇತನ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿಯನ್ನು ನೀಡಲಾಗಿರುತ್ತದೆ. ರಾಜ್ಯದಲ್ಲಿ ಈ ಬಗ್ಗೆ 'ಸಿ' ಮತ್ತು 'ಡಿ' ಸಮೂಹದ ಅಂಗವಿಕಲ ನೌಕರರಿಗೆ ಮಾತ್ರ ಬಡ್ತಿಯಲ್ಲಿ ಶೇ.4ರಷ್ಟು ಮೀಸಲಾತಿಯನ್ನು ಹಿಂದಿನ ಸರ್ಕಾರವು ನೀಡಲಾಗಿರುತ್ತದೆ.**

**ಆದರೆ, ಸದರಿ ಮೀಸಲಾತಿಯು 'ಎ' ಮತ್ತು 'ಬಿ' ಗುಂಪಿಗೂ ಅನ್ವಯವಾಗುವ ವಿಚಾರವನ್ನು ಗಂಭೀರವಾಗಿ ಪರಿಗಣಿಸಲು ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.**

**ಸರ್ಕಾರದ ಉತ್ತರ:**

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016 ರ ಕೇಂದ್ರ ಅಧಿನಿಯಮ ಸಂಖ್ಯೆ 49) [The Rights of Persons with Disabilities Act, 2016 (Central Act No. 49 of 2016] ರ ಸೆಕ್ಷನ್ 34ರ ಉಪ ಸೆಕ್ಷನ್ (1)ರ ಮೊದಲನೇ ಪರಂತುಕದಲ್ಲಿ ಈ ಕೆಳಕಂಡಂತೆ ಆಸ್ಪದವನ್ನು ಕಲ್ಪಿಸಲಾಗಿರುತ್ತದೆ:-

> "Provided that the reservation in promotion shall be in accordance with such instructions as are issued by the appropriate Government from time to time."

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 1567/2017- ಶ್ರೀ ಸಿದ್ದರಾಜು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ಹಾಗೂ ಸಂಬಂಧಿಸಿದ ಇತರ ಸಿವಿಲ್

ಅಪೀಲುಗಳಲ್ಲಿ ದಿನಾಂಕ: 14.01.2020 ರಂದು ನೀಡಿರುವ ತೀರ್ಪಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಮಿಸಲೇನಿಯಸ್ ಅಪ್ಲಿಕೇಷನ್ ಸಂಖ್ಯೆ: 2171/2020 ಹಾಗೂ ಸಂಬಂಧಿಸಿದ ಇತರ ಅರ್ಜಿಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 28.09.2021 ರಂದು ನೀಡಿದ ಆದೇಶದ ಕಂಡಿಕೆ 5 ರಲ್ಲಿ ಕೇಂದ್ರ ಸರ್ಕಾರಕ್ಕೆ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ:-

> "5. Having examined the judgments of this Court and the submissions made on behalf of the parties, we are of the opinion that there is no ambiguity in the judgments which warrants any clarification. The Union of India is directed to issue instructions regarding reservation in promotion as provided in Section 34 of the Rights of Persons with Disabilities Act, 2016 within a period of four months from today."

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 28.09.2021 ರ ಆದೇಶದಲ್ಲಿ ನೀಡಿದ ಮೇಲೆ ಉದ್ಧರಿಸಲಾದ ನಿರ್ದೇಶನವನ್ನು ಉಲ್ಲೇಖಿಸಿ, ಕೇಂದ್ರ ಸರ್ಕಾರವು ದಿನಾಂಕ: 17.05.2022ರ ಅಧಿಕೃತ ಜ್ಞಾಪನ ಸಂಖ್ಯೆ: 36012/1/2020-Estt.(Res.-II) ರಲ್ಲಿ ಎದ್ದುಕಾಣುವ ಅಂಗವೈಕಲ್ಯ (Benchmark disability) ವನ್ನುಳ್ಳ ಕೇಂದ್ರ ಸರ್ಕಾರಿ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಆಸ್ಪದವನ್ನು ಕಲ್ಪಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಸಚಿವ ಸಂಪುಟದ ಅನುಮೋದನೆಯೊಂದಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗುಂಪು-ಡಿ ಮತ್ತು ಗುಂಪು-ಸಿ ವೃಂದಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಶೇ 4ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ 'ಎ' ಮತ್ತು 'ಬಿ' ವೃಂದದಲ್ಲಿ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ನೀಡುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಸಂಖ್ಯೆ: ಸಿಆಸುಇ 150 ಸೆನೆನಿ 2023.